**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ**

**ಸತ್ರ ಪ್ರಕರಣ ಸಂಖ್ಯೆ 42/2023**

ಪಿರ್ಯಾದಿ : ರಾಮನಗರ ಪುರ ಆರಕ್ಷಕ ಠಾಣೆ,
ರಾಜ್ಯದ ಪರವಾಗಿ

Vs.

ಆರೋಪಿ: 1. ಬೋರಯ್ಯ @ ಬೋರ

**ದೋಷಾರೋಪಣೆ**

I, ರಾಘವೇಂದ್ರ ಜಿ., ಬಿ.ಎಸ್.ಸಿ., ಎಲ್.ಎಲ್.ಬಿ., 3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ, ಈ ಮೂಲಕ ನಿಮ್ಮನ್ನು ಈ ಕೆಳಗೆ ಹೇಳಿದಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆ.

ಆರೋಪಿ: 1. ಬೋರಯ್ಯ @ ಬೋರ ,
ಬಿನ್ ಮಯೂರ,
ವಯಸ್ಸು 48 ವರ್ಷ,
ವಾಸಃ ಅಮ್ಮನಪುರ ಗ್ರಾಮ,
ಕೈಲಾಂಚ ಹೋಬಳಿ,
ರಾಮನಗರ ತಾಲ್ಲೂಕು ಮತ್ತು ಜಿಲ್ಲೆ.

ದಿನಾಂಕಃ 21.11.2022 ರಂದು ಸಂಜೆ 7.30 ಗಂಟೆ ಸಮಯದಲ್ಲಿ ನೀವು ಆರೋಪಿ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಅಮ್ಮನಪುರದ ಗ್ರಾಮದ ದೋ.ಪ.ಸಾಕ್ಷಿ-02 ಶ್ರೀ ಮಹಾದೇವಯ್ಯ ರವರ ಮನೆಯಿಂದ ಸ್ವಲ್ಪ ದೂರದಲ್ಲಿ ನಿಮ್ಮ ಹೆಂಡತಿ ಮೃತೆ ಭದ್ರಮ್ಮರವರಿಗೆ ಕೈಗಳಿಂದ ಹೊಡೆದು ಗಲಾಟೆ ಮಾಡಿದ್ದು ಮೃತೆ ಭದ್ರಮ್ಮ ರವರಿಗೆ ಮನೆಗೆ ಬಾ, ಹಿಟ್ಟು ಮಾಡು ಎಂದು ಕರೆದು, ದೋ.ಪ.ಸಾಕ್ಷಿ-02 ರವರಿಗೆ ಇವಳನ್ನು ಹೇಗೆ ಕರೆದುಕೊಂಡು ಹೋಗಬೇಕು ಎಂದು ನನಗೆ ಗೊತ್ತು ಎಂದು ಹೇಳಿ ಮಾರ್ಗ ಮಧ್ಯದಲ್ಲಿ ಅಮ್ಮನಪುರ ಗ್ರಾಮದ ಸರ್ವೆ ನಂ 16 ರ ದೋ.ಪ.ಸಾಕ್ಷಿ-05 ಶ್ರೀ ರೇಣುಕರಾಧ್ಯರವರ ಮಾವಿನ ತೋಟದ ಜಮೀನಿನಲ್ಲಿ ರಾತ್ರಿ 10.00 ಗಂಟೆಯ ಸಮಯದಲ್ಲಿ ಅಲ್ಲೇ ಮಾವಿನ ಮರದಲ್ಲಿದ್ದ ಸೌದೆಯನ್ನು ಮುರಿದುಕೊಂಡು ಕೊಲೆ ಮಾಡುವ

ಉದ್ದೇಶದಿಂದ ನೀವು ಆರೋಪಿ ಮೃತೆ ಭದ್ರಮ್ಮನ ಮುಖ, ಕೆನ್ನೆ, ಹಣೆ, ಕತ್ತು, ಕೈ ಕಾಲುಗಳ ಮೇಲೆ ಹೊಡೆದು ಕೊಲೆ ಮಾಡಿದ್ದು ಈ ಮೂಲಕ ಭಾರತ ದಂಡ ಸಂಹಿತೆ ಕಲಂ 302 ರಡಿ ಅಪರಾಧ ನನ್ನ ಸಂಜ್ಞೇಯತೆಯಲ್ಲಿ ಎಸಗಿರುತ್ತೀರ.

ನಾನು ನಿಮ್ಮನ್ನು ಮೇಲೆ ಹೇಳಿದ ದೋಷಾರೋಪಣೆಗೆ ವಿಚಾರಣೆ ಆಗತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ದಿನಾಂಕ: 28.08.2024.

**(ಶ್ರೀ.ರಾಘವೇಂದ್ರ ಜಿ.)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ

**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ</u>**

<u>ಸತ್ರ ಪ್ರಕರಣ ಸಂಖ್ಯೆ</u> **<u>42/2023</u>**

ಪಿರ್ಯಾದಿ : ರಾಮನಗರ ಪುರ ಆರಕ್ಷಕ ಠಾಣೆ,
ರಾಜ್ಯದ ಪರವಾಗಿ

Vs.

ಆರೋಪಿಗಳು: 1. ಬೋರಯ್ಯ @ ಬೋರ

**<u>ದೋಷಾರೋಪಣೆ</u>**

ಪ್ರಶ್ನೆ.1: ಈಗ ಓದಿ ಹೇಳಿ ವಿವರಿಸಿದ ದೋಷಾರೋಪಣೆ ನಿಮಗೆ ಅರ್ಥ ಆಗಿರುತ್ತದೆಯೇ?

ಉತ್ತರಃ

ಪ್ರಶ್ನೆ.2: ನೀವು ತಪ್ಪು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಆಗಬೇಕೇ?

ಉತ್ತರಃ

( ಆರೋಪಿಯನ್ನು ಮೇಲೆ ಹೇಳಿದಂತೆ ನನ್ನ ಸಮ್ಮುಖದಲ್ಲಿ ಪ್ರಶ್ನೆ ಮಾಡಿದ್ದು ಅವರು ಕೊಟ್ಟ ಉತ್ತರವನ್ನು ಅವರು ಕೊಟ್ಟಂತ್ತೆಯೇ ತೆಗೆದುಕೊಂಡಿರುತ್ತದೆ ಎಂದು ಈ ಪ್ರಮಾಣ ಪತ್ರ).

ದಿನಾಂಕ: 28.08.2024

**(ಶ್ರೀ.ರಾಘವೇಂದ್ರ ಜಿ.)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ